## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ

ಸಿ.ಸಿ.ನಂಃ 493/2015

**ಚಾಸಾಃ( 06 ) ಪ್ರಾಸಾ ( 01)**

**ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.**

**ದಿನಾಂಕಃ 01-09-2025.**

| | |
|---|---|
| ಸಾಕ್ಷಿದಾರರ ಹೆಸರು | ಮಹಾದೇವಪ್ಪ |
| ಗಂಡ ಹೆಸರು | ಶಿವಪ್ಪ ಕಟಗಿ |
| ವಯಸ್ಸು | 60 ವರ್ಷ |
| ಉದ್ಯೋಗ | ಕೃಷಿ |
| ವಾಸಸ್ಥಳ | ಹಾದರಮಗ್ಗಿ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ದಿಃ 12-11-2013 ರಂದು ಬೆ. 10.30 ರಿಂದ 11.00 ರ ಅವದಿಯನ್ನು ನಾನು ಚಾಸಾ 5 ರವರು ಜಮೀನಿಂದ ಮರಳಿ ಬರುತ್ತಿದಾಗ ಚಾಸಾ 1 ಮತ್ತು 3 ರವರ ಮದ್ಯೆ ಹಣದ ವಿಷಯವಾಗಿ ಮಾತುಕತೆ ನಡೆದಿತ್ತು. ಅದಕ್ಕೆ ಘಟನ ಜಾಗದಲ್ಲಿ ಪಂಚನಾಮೆಯನ್ನು ಮಾಡಿ ನನ್ನ ಮತ್ತು ಚಾಸಾ 5 ರವರ ಸಹಿ ಪಡೆದುಕೊಂಡಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿದಾರ ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಅಂತ ಹಿಸಸಅ ರವರು ಈ ಸಾಕ್ಷಿಯನ್ನು ಭಾಗಶ್ಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಕೋರಿಕೊಂಡಿದ್ದು ಪಾಟೀಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಸಅ ರವರಿಂದಃ**

ನಿಪಿ 1 ನ್ನು ಚಾಸಾ 1 ರವರ ಮನೆಯಲ್ಲಿ ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರು ನೌಕರಿ ಕೊಡಿಸುತ್ತೇನೆ ಎಂದು ಹೇಳಿ ಚಾಸಾ 1 ರವರ ಬಳಿ ಹಣ ಪಡೆದು ಹಣ ವಂಚಿಸಿದ್ದು ಅ ವಿಷಯವಾಗಿ ನಿಪಿ 1 ತಯಾರಿಸಿರುತ್ತಾರೆ ಎಂದರೆ ಸರಿ. ನಿಪಿ 1 ನ್ನು ಘಟನ ಜಾಗದಲ್ಲಿ ಬರೆದಿರುತ್ತಾರೆ ಎಂದರೆ ಸರಿ. ಚಾಸಾ 1 ರವರ ಪರಿಚಯ ನನಗೆ ಇದೆ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ**

ಎನೂ ಪಂಚನಾಮೆಗೆ ಸಹಿ ಮಾಡಲು ನನನ್ನು ಚಾಸಾ 3 ರವರು ಕರೆದಿರುತ್ತಾರೆ. ಸದರಿ ಪಂಚನಾಮೆಯ ಕಾಲಕ್ಕೆ ಪೋಲಿಸರು ಸಹ ಇದ್ದು ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯ ವಿಷಯ ಹೇಳಿದ ಪೋಲಿಸರ ಹೆಸರು ನನಗೆ ಗುತ್ತಿಲ್ಲ. ಘಟನ ಜಾಗದ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 1 ರಲ್ಲಿ ಬರೆದಿರುವ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾ 1 ರವರು ಕರೆದಿದಕ್ಕೆ ನಾನು ಸಾಕ್ಷಿ ನುಡಿಯುದಕ್ಕೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 1 ನ್ನು ತಯಾರಿಸುವ ಕಾಲಕ್ಕೆ ನಾನು ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರು ನನ್ನ ಸಂಬಂಧಿಕರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ**

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**